


## ಚಕ್ರಗಳಿಗೂ ಬಿಸಿಲಿನಿಂದ ರಕ್ಷಣೆ

ಅತೀ ಹೆಚ್ಚು ಮಳೆ ಬೀಳುವ ಮಲೆನಾಡಿನಲ್ಲೂ ಈ ಬಾರಿ ಬೇಸಿಗೆ ನರ್ತನ ಮಾಡುತ್ತಿದೆ. ಕಳೆದ ಋತುವಿನಲ್ಲಿ ವಾಡಿಕೆಗಿಂತ ತೀರಾ ಕಡಿಮೆ ಮಳೆಯಾಗಿದ್ದೇ ಇದಕ್ಕೆ ಕಾರಣ. ಬಿಸಿಲಿನ ತಾಪ ಬರಿ ಮನುಷ್ಯರು, ಪ್ರಾಣಿ, ಪಕ್ಷಿಗಳಿಗೆ ಮಾತ್ರವೇ ತಟ್ಟಿಲ್ಲ. ವಾಹನಗಳ ಟೈರ್‌ಗೂ ತಟ್ಟಿದೆ.

ಈಚೆಗೆ ನಮ್ಮ ಬೀದಿಯ ವಾಸಿ ಮಿತ್ರ ಶ್ರೀಧರ್ ಅವರ ಮನೆ ಮುಂದೆ ನಿಲ್ಲಿಸಿದ ನಾಲ್ಕು ಚಕ್ರದ ಗೂಡ್ಸ್ ವಾಹನದ ಟೈರ್‌ಗಳಿಗೆ ಹೊದಿಕೆ ಹಾಕಿದ್ದು ಗಮನಿಸಿ ವಿಚಾರಿಸಿದೆ. ಅದಕ್ಕವರು, 'ಬಿಸಿಲಿನ ತಾಪದಿಂದ ಟೈರ್‌ಗೆ ರಕ್ಷಣೆ ನೀಡಲು ಹೀಗೆ ಮಾಡಲಾಗಿದೆ' ಎಂದರು. ಈ ಸಾರಿ ಎಷ್ಟೋ ಕಡೆ ನಿಲ್ಲಿಸಿದ ವಾಹನಗಳ ಟೈರ್‌ನ ಗಾಳಿ ಇಳಿದಿದೆ. ಟೈರ್‌ಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿವೆ. ಇದಕ್ಕೆಲ್ಲ ಬಿಸಿಲಿನ ತಾಪವೇ ಕಾರಣ ಎನ್ನುವುದು ಅವರ ಮಾತು. ಇಷ್ಟು ವರ್ಷದಲ್ಲಿ ಯಾವತ್ತೂ ಈ ರೀತಿ ಆಗಿಲ್ಲ. ಟೈರ್ ಒಡೆದರೆ ಮತ್ತೆ ಸಾವಿರಾರು ರೂಪಾಯಿ ಖರ್ಚು. ಇಲ್ಲದ ಸಮಸ್ಯೆ ಯಾಕೆ ಬೇಕೆಂದು ಟೈರ್‌ಗಳನ್ನು ಬಿಸಿಲಿನಿಂದ ಹೀಗೆ ರಕ್ಷಿಸಲಾಗುತ್ತಿದೆ. ಇದೊಂಥರ, ಬಿಸಿಲಿನಿಂದ ರಕ್ಷಣೆ ಪಡೆಯಲು ಮನುಷ್ಯರು ಛತ್ರಿಯ ಮೊರೆಹೋದಂತೆ...

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ



## ಮಗುವಿನ ಬೀದಿನಾಯಿ ಪ್ರೀತಿ



ದೈನಂದಿನ ಚಟುವಟಿಕೆ ಗರಿಗೆದರುವ ಸಮಯವದು. ಆಗಲೇ ವಾಕಿಂಗ್, ಜಾಗಿಂಗ್ ಸಹ ಶುರುವಾಗಿತ್ತು. ಎಂದಿನಂತೆ, ಬೆಳಗಿನ ಆಹ್ಲಾದಕರ ವಾತಾವರಣ ಆಸ್ವಾದಿಸಲು ಮನೆಯಿಂದ ಸ್ವಲ್ಪ ದೂರ ಸಾಗಿದೆ. ಅಲ್ಲಿನ ರಸ್ತೆ ಬದಿಯೊಂದರಲ್ಲಿ ನಾಲ್ಕೈದು ವರ್ಷದ ಹೆಣ್ಣು ಮಗುವೊಂದು ಬೀದಿ ನಾಯಿಮರಿಗಳೊಡನೆ ಅದಾಗಲೇ ಪ್ರೀತಿಯ ಸಾಮ್ರಾಜ್ಯ ಕಟ್ಟಿ ಅದರಲ್ಲಿ ಸಂಭ್ರಮಿಸುತ್ತಿದ್ದಳು. ನಾಯಿಮರಿಗಳನ್ನು ಪ್ರೀತಿಯಿಂದ ಮೈದಡುವುತ್ತಾ ಕಾಲ ಕಳೆಯುತ್ತಿದ್ದಳು. ನಾಯಿ ಮರಿಗಳ ಬಗ್ಗೆ ಆಕೆಗಿದ್ದ ಕಾಳಜಿಯನ್ನು ಕಂಡು ನಿಜಕ್ಕೂ ಬೆರಗಾದೆ. ತನ್ನ ಮನೆಯ ಸದಸ್ಯರಂತೆಯೇ ಅವುಗಳೊಂದಿಗೆ ಆಕೆ ಬೆರೆತದ್ದು ಮನಸ್ಸಿಗೆ ಮುದ ನೀಡಿತು.

–ಮೈ. ಸತೀಶ ಕುಮಾರ, ಬಂಗಾರಪೇಟೆ





## ಶಯನ ಭಂಗಿಯ ಭದ್ರ ಮಾರುತಿ

ಶ್ರೀರಾಮಚಂದ್ರನ ಪರಮ ಭಕ್ತನಾದ ಆಂಜನೇಯನನ್ನು ನಿಂತ ಭಂಗಿಯಲ್ಲಿ ಎಲ್ಲೆಡೆ ನೋಡಿರುತ್ತೇವೆ. ಮಲಗಿಕೊಂಡಿರುವ ಭಂಗಿಯಲ್ಲಿರುವ ಆಂಜನೇಯನ ಮೂರ್ತಿಗಳು ಅಪರೂಪವೆಂದೇ ಹೇಳಬಹುದು. ಮಹಾರಾಷ್ಟ್ರದ ಔರಂಗಾಬಾದ್‌ನಿಂದ 26 ಕಿ.ಮೀ. ಹಾಗೂ ಎಲ್ಲೋರಾ ಗುಹೆಗಳಿಂದ 4 ಕಿ.ಮೀ. ದೂರದಲ್ಲಿರುವ 'ಖುಲ್ದಾಬಾದ್' ಗ್ರಾಮದಲ್ಲಿ ಮಲಗಿದ ಭಂಗಿಯಲ್ಲಿರುವ ಮಾರುತಿ 'ಭದ್ರ ಮಾರುತಿ' ಎಂದೇ ಪ್ರಖ್ಯಾತವಾಗಿದ್ದು, ಭಕ್ತರನ್ನು ಆಕರ್ಷಿಸುತ್ತಿದೆ.

ರಾಮನ ಪರಮಭಕ್ತ ಭದ್ರಸೇನ ಒಮ್ಮೆ ರಾಮನನ್ನು ಸ್ತುತಿಸುತ್ತಾ ಹಾಡುತ್ತಿದ್ದ. ಆಕಾಶದಲ್ಲಿ ಸಂಚರಿಸುತ್ತಿದ್ದ ಹನುಮಂತನು ಹಾಡಿನ ಮಾಧುರ್ಯಕ್ಕೆ ಮನಸೋತು ಭದ್ರಸೇನ ಇದ್ದ ಜಾಗಕ್ಕೆ ಬರುತ್ತಾನೆ. ಹಾಡನ್ನು ಕೇಳುತ್ತಾ ಮೈಮರೆತು ಅಲ್ಲಿಯೇ ಮಲಗಿ ಬಿಡುತ್ತಾನೆ. ಹಾಡು ಮುಗಿದ ನಂತರ ತನ್ನ ಮುಂದೆ ಹನುಮಂತನು ಮಲಗಿರುವುದನ್ನು ಕಂಡ ಭದ್ರಸೇನ ಮೂಕವಿಸ್ಮಿತನಾಗುತ್ತಾನೆ. ಶ್ರೀರಾಮನ ಭಕ್ತರನ್ನು ಆಶೀರ್ವದಿಸಲು ಅಲ್ಲಿಯೇ ಶಾಶ್ವತವಾಗಿ ಉಳಿಯುವಂತೆ ಹನುಮಂತನಲ್ಲಿ ಬೇಡಿಕೊಳ್ಳುತ್ತಾನೆ. ಭದ್ರಸೇನನ ಕೋರಿಕೆಗೆ ಸೋತ ಹನುಮಂತ ಅಲ್ಲಿಯೇ ನೆಲೆನಿಲ್ಲುತ್ತಾನೆ. ನಂತರದ ದಿನಗಳಲ್ಲಿ ಭಕ್ತರು ದೇವಾಲಯ ನಿರ್ಮಿಸಿದರೆಂಬುದು ಐತಿಹ್ಯ.

ಸುಮಾರು ಹತ್ತು ಅಡಿಗಳಷ್ಟು ಉದ್ದವಿರುವ ಕುಸುರಿ ಕೆಲಸದ ಬೆಳ್ಳಿ ಚೌಕಟ್ಟಿನ ಪೀಠದೊಳಗೆ ಮಲಗಿಕೊಂಡಿರುವ ಹನುಮಂತನ ವಿಗ್ರಹವು ಆಕರ್ಷಣೀಯವಾಗಿದೆ. ಪ್ರಸಿದ್ಧ ಯಾತ್ರಾ ಸ್ಥಳವಾಗಿರುವ ಈ ದೇವಾಲಯದಲ್ಲಿ ಶ್ರೀರಾಮನವಮಿ, ಹನುಮ ಜಯಂತಿ ಹಾಗೂ ಪರ್ವದಿನಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಇದೇ ರೀತಿ ಮಲಗಿರುವ ಭಂಗಿಯಲ್ಲಿರುವ ಹನುಮಂತನ ದೇವಾಲಯಗಳು ಮಧ್ಯಪ್ರದೇಶ ಮತ್ತು ಅಲಹಾಬಾದ್ ಹಾಗೂ ಕರ್ನಾಟಕ ರಾಜ್ಯದ ತುಮಕೂರಿನ ಗುಬ್ಬಿ ತಾಲ್ಲೂಕಿನಲ್ಲಿ (ಬಿದ್ದಾಂಜನೇಯ) ಕಾಣಬಹುದು.

–ಜಿ. ನಾಗೇಂದ್ರ ಕಾವೂರು, ಸಂಡೂರು